ನಾಯ್ಡು ಅವರ ಕಡೆಯಿಂದ ಬರತಕ್ಕಂಥ ಅಡೆತಡೆಗಳನ್ನು ಯಾವ ರೀತಿ ನಿಭಾಯಿಸುತ್ತೀರಿ ಎನ್ನುವ ಮಾತನ್ನು ತಾವು ಉತ್ತರ ಕೊಡುವಂತಹ ಸಂದರ್ಭದಲ್ಲಿ ಹೇಳಬೇಕೆಂದೂ ಮತ್ತು ತಾವು ಪ್ರಾಮಾಣಿಕವಾದ ಕೆಲಸವನ್ನು ಮಾಡಬೇಕೆಂದು ಹೇಳಿ, ನನಗೆ ಅವಕಾಶ ಕೊಟ್ಟ ಉಪಾಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

7 ರಾಷ್ಟ್ರೀಯ ಅಜೆಂಡಾದಲ್ಲಿ ಕಾವೇರಿ ವಿಷಯವನ್ನು ಸೇರಿಸಿರುವುದರ ಬಗ್ಗೆ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಉಪಾಧ್ಯಕ್ಷರೇ.

ಉಪಾಧ್ಯಕ್ಷರು:- ಬೇಡ , ಬೇಡ ಮಾನ್ಯ ಶ್ರೀ ರಾಮರೆಡ್ಡಿಯವರು ಮಾತನಾಡಲಿ. ತಾವು ಈ ವಿಷಯವನ್ನು ಮಾತನಾಡಲು ಶುರು ಮಾಡಿದರೆ ಎಲ್ಲರೂ ಮಾತನಾಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್:- ಇದು ಬಹಳ ಪ್ರಾಮುಖ್ಯವಾದ ವಿಷಯ. ಮಾನ್ಯ ಮುಖ್ಯಮಂತ್ರಿಗಳು ಸಭೆಯಲ್ಲಿದ್ದಾರೆ. ರಾಷ್ಟ್ರೀಯ ಅಜೆಂಡಾದಲ್ಲಿ ಕಾವೇರಿಯನ್ನು ಸೇರಿಸಿದ್ದಾರೆ ಕಾವೇರಿ ನೀರನ್ನು ಪ್ರತಿ ವರ್ಷ 205 ಟಿಎಂಸಿ ಬಿಡುವ ಬಗ್ಗೆ ರಾಷ್ಟ್ರೀಯ ಅಜೆಂಡಾದಲ್ಲಿ ಸೇರಿದ್ದಾರೆ. ಅದರ ಬಗ್ಗೆ ನಮ್ಮ ಸರ್ಕಾರದ ನಿಲುವು ಏನು?

ಉಪಾಧ್ಯಕ್ಷರು:- ಬೇಡ. ತಾವು ದಯಮಾಡಿ ಕುಳಿತುಕೊಳ್ಳಿ. ಅವರು ಕಮ್ಯುನಿಸ್ಟ್ ಪಕ್ಷದ ನಾಯಕರು.

ಶ್ರೀ ವಾಟಾಳ್ ನಾಗರಾಜ್:- ನಮ್ಮ ಸರ್ಕಾರದ ನಿಲುವು ಏನು? ರಾಷ್ಟ್ರೀಯ ಅಜೆಂಡಾದಲ್ಲಿ ಕಾವೇರಿ ವಿಷಯ ಸೇರಿಸಿದ್ದಾರೆ.

ಉಪಾಧ್ಯಕ್ಷರು:- ಬೇಕಾದ್ದು ಮಾಡಿ. ನಾನು ಏನೂ ಮಾಡಲು ಸಾಧ್ಯ? ತಾವು ಒಬ್ಬರು ಮಾತನಾಡಿದರೆ ಎಲ್ಲರೂ ಮಾತನಾಡುತ್ತಾರೆ. ಸಾಧ್ಯವಾಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್:- ಆಯಿತು ನಾನು ಮಾತನಾಡುವುದಿಲ್ಲ ಬಿಡಿ ಸ್ವಾಮಿ ರಾಷ್ಟ್ರೀಯ ಅಜೆಂಡಾದಲ್ಲಿ ಕಾವೇರಿ ವಿಷಯವನ್ನು ಸೇರಿಸಿರುವುದನ್ನು ವಿರೋಧಿಸಿ ನಾನು ಈ ಸಭೆಯಲ್ಲಿ ಧರಣಿ ಮಾಡುತ್ತೇನೆ.

(ಮಾನ್ಯ ವಾಟಾಳ್ ನಾಗರಾಜ್ ಅವರು ಸಭಾಧ್ಯಕ್ಷರ ಪೀಠದ ಮುಂದೆ ಧರಣಿ ಕುಳಿತರು).

ಉಪಾಧ್ಯಕ್ಷರು:- ಆಯಿತು, ತಾವು ಧರಣಿ ಮಾಡಿ, ಶ್ರೀರಾಮರೆಡ್ಡಿಯವರೇ ತಾವು ಮಾತನಾಡಿ.

ಶ್ರೀ ಎಂ. ಪಿ. ಪ್ರಕಾಶ್:- ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಬಹಳ ಗಂಭೀರವಾದ ವಿಷಯವನ್ನು ಸದನದ ಗಮನಕ್ಕೆ ತಂದಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಇದನ್ನು ನೋಡಿದ್ದಾರೆ. ನಾಳೆ ಉತ್ತರ ಕೊಡುವಾಗ ಇದಕ್ಕೆ ನಿರ್ದಿಷ್ಟವಾಗಿ ಒಂದು ಉತ್ತರವನ್ನು ಕೊಡುತ್ತೇವೆ ತಾವು ಧರಣಿ ಮಾಡಬೇಡಿ ಮಾನ್ಯ. ಮುಖ್ಯಮಂತ್ರಿಗಳು ನಾಳೆ ಉತ್ತರ ಕೊಡುತ್ತಾರೆ.

ಶ್ರೀ ಕೆ.ಎನ್. ನಾಗೇಗೌಡ:- ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸದಸ್ಯರು ತಮ್ಮ ಸ್ಥಳಕ್ಕೆ ಬಂದರೆ ನಾನು ಉತ್ತರ ಕೊಡುತ್ತೇನೆ.